# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 31.08.2016 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

1. ಮಾನ್ಯ ಕುಲಪತಿಯವರು, ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಹಾಜರಾಗಲು ಆಯುಕ್ತರಿಂದ ನಾಮನಿರ್ದೇಶನಗೊಂಡ ಶ್ರೀ.ಅತ್ತರ್ ಹುಸೇನ್ ಫಾರೂಖಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು ಇವರನ್ನು ಸಭೆಗೆ ಸ್ವಾಗತಿಸಿದರು.

2. ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಹಾಜರಾಗುತ್ತಿದ್ದ ಶ್ರೀ ಎಸ್.ವಿ.ಅಪ್ಪಾಜಿ, ಜಂಟಿ ನಿರ್ದೇಶಕರು (ಪ್ರಭಾರ), ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ ಮಂಗಳೂರು ಇವರು ವಯೋನಿವೃತ್ತಿ ಹೊಂದಿರುವ ವಿಚಾರವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿ ಅವರು ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

3. ಪ್ರಾಧ್ಯಾಪಕರ ಜೇಷ್ಠತೆ ಹಾಗೂ ಸರದಿಯ ಪ್ರಕಾರ ಸಿಂಡಿಕೇಟ್‌ಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಡಾ.ಆರ್.ಶಶಿಧರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಂಗ್ಲ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಒಂದು ವರ್ಷದ ಅವಧಿಯು ಕೊನೆಗೊಂಡಿರುವುದರಿಂದ ಇವರನ್ನು ಸಿಂಡಿಕೇಟ್ ಸದಸ್ಯತ್ವದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿ ಸದರಿಯವರು ತಮ್ಮ ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

## ಪ್ರಾಸ್ತಾವಿಕ

1. ಭಾರತ ದೇಶದ ವಿವಿಧ ಭಾಗಗಳಲ್ಲಿ/ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ವಿಚಾರ ಸಂಕಿರಣಗಳು/ಕಾರ್ಯಾಗಾರಗಳು/ಸಮ್ಮೇಳನಗಳ ಗುಣಮಟ್ಟದ ಬಗ್ಗೆ ಸಿಂಡಿಕೇಟು ಸಭೆಯು ಚರ್ಚಿಸಿ ಒಂದೇ ಶೀರ್ಷಿಕೆಯ ಸೆಮಿನಾರುಗಳಿಗೆ ವಿವಿಧ ವಿಷಯಗಳ ಪರಿಣತರು ಪ್ರಬಂಧ ಮಂಡಿಸುವುದು ಹಾಗೂ ಅವುಗಳ ಗುಣಮಟ್ಟದ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿತು. ಒಂದೇ ಸಂಸ್ಥೆಯಿಂದ ಹಲವಾರು ಉಪನ್ಯಾಸಕರು ಒಂದೇ ಅವಧಿಯಲ್ಲಿ ಭಾಗವಹಿಸುವುದನ್ನು ಗಮನದಲ್ಲಿಟ್ಟುಕೊಂಡು ದೀರ್ಘ ಚರ್ಚೆ ನಡೆಸಿ ಈ ಕೆಳಗಿನಂತೆ ನಿರ್ಣಯಿಸಿತು.

ಅ) ಒಂದು ಸಂಸ್ಥೆಯಿಂದ ಏಕ ಕಾಲದಲ್ಲಿ ಎರಡು ಮಂದಿಗೆ ಮಾತ್ರ ಭಾಗವಹಿಸಲು ಅನುಮತಿ ನೀಡುವುದು.

ಆ) ಏಕ ಕಾಲದಲ್ಲಿ ಒಂದು ವಿಭಾಗದಿಂದ ಒಬ್ಬರಿಗೆ ಮಾತ್ರ ಭಾಗವಹಿಸಲು ಅನುಮತಿ ನೀಡುವುದು.

ಇ) ಸಂಬಂಧಪಟ್ಟವರು ಮಂಡಿಸುವ ಸಂಶೋಧನಾ ಪ್ರಬಂಧವು ಪ್ರಕಟಗೊಂಡ ನಂತರ ಅದಕ್ಕೆ ದೊರಕಿರುವ ISBN Numberನ್ನು ತೆಗೆದುಕೊಂಡು ವಿಶ್ವವಿದ್ಯಾನಿಲಯಕ್ಕೆ ಲಿಖಿತ ವರದಿ ಸಲ್ಲಿಸುವುದು.

ಈ) ಒಂದೇ ವಿಭಾಗದಿಂದ ಇಬ್ಬರು ಅಥವಾ ಹೆಚ್ಚು ಉಪನ್ಯಾಸಕರು ಭಾಗವಹಿಸಲು ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಸೇವಾ ಹಿರಿತನವನ್ನು ಗಮನದಲ್ಲಿಟ್ಟುಕೊಂಡು ಸರದಿ ಪ್ರಕಾರ ಒಬ್ಬರಿಗೆ ಭಾಗವಹಿಸಲು ಅನುಮತಿ ನೀಡುವುದು.

**I ನಡಾವಳಿಗಳ ದೃಢೀಕರಣ**

ದಿನಾಂಕ 30.07.2016ರಂದು ನಡೆದ 2016ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 21.06.2016ರಂದು ನಡೆದ 2016ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ಅನುಮೋದಿಸಲಾಯಿತು.

1. ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು ಸಾ.ಸ.4:28(2016)

   ವಿಷಯ : ಡಾ ಪುಷ್ಪ ಕುಟ್ಟಣ್ಣ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

   ನಿರ್ಣಯ: ಸದರಿ Vision Statement ನಲ್ಲಿ National and International ಎಂಬ ತಿದ್ದುಪಡಿಯನ್ನು ಅಳವಡಿಸಿಕೊಳ್ಳುವುದು ಮತ್ತು ಈ ಕುರಿತು ಅಧಿಸೂಚನೆ ನೀಡಿ ಬದಲಾವಣೆಯನ್ನು ಜಾರಿಗೆ ತರಲು ನಿರ್ಣಯಿಸಲಾಯಿತು.

2. **ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.4:44(2016)

   **ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆಡಳಿತ ಕಟ್ಟಡಕ್ಕೆ ವಿದ್ಯುತ್‌ಚಾಲಿತ ಲಿಫ್ಟ್‌ನ್ನು ಅಳವಡಿಸುವುದು.
   ಅಂದಾಜು ಮೊತ್ತ ರೂ.51.00 ಲಕ್ಷಗಳು

   **ನಿರ್ಣಯ:** ಕಟ್ಟಡ ಸಮಿತಿಯ ಶಿಫಾರಸ್ಸನ್ನು ಸದ್ಯಕ್ಕೆ ತಡೆಹಿಡಿಯಲು ನಿರ್ಧರಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು**

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |